(ಶ್ರೀ ಎಸ್. ಗೋಪಾಲ ಗೌಡ)

ಅವಸರವಸರವಾಗಿ ಹೆಚ್ಚು ಚರ್ಚೆಯಿಲ್ಲದಂತೆ ಇವೊತ್ತು ಹೋಗುತ್ತಿರುವುದು ತಮಗೆ ಗೊತ್ತಾಗಿದೆ, ಈ ವಿಷಯವನ್ನು ಹೇಳುವಾಗ ಸರಕಾರಕ್ಕೆ ಬೇಕಾದಷ್ಟು ಕೆಲಸಗಳಿವೆ ಎಂದು ಗೊತ್ತಿದ್ದರೂ ಕೂಡ ಇಷ್ಟು ಅವಸರವಸರವಾಗಿ ನಮ್ಮ ಮುಂದೆ ಈಗ ಬಂದು ಇಷ್ಟು ಮಸೂದೆಗಳನ್ನು ಇಡುವುದಕ್ಕೂ ಇಷ್ಟವಿಲ್ಲ ಎಂದು ತೋರುತ್ತದೆ ಎಂದು ನಾನು ಇಲ್ಲಿ ಹಿಷಾದದಿಂದ ಹೇಳಬೇಕಾಗಿದೆ. ತಮಗೆ ಉದಾಹರಣೆ ಹೆಳಬೇಕಾದರೆ ಬೇಕಾದಷ್ಟು ಹೇಳಬಹುದು. ಹೀಗಿರುವಾಗ ನಾವು ಹೇಗೆ ಸಹಕರಿಸ ಬೇಕು? ನಮ್ಮ ಮುಂದೆ ಈಗ ಸಿವಿಲ್ ಸರ್ವಿಸಸ್ ಕ್ಲಾಸ್ 3 ರೆಕ್ರೂಟ್‌ಮೆಂಟು ಆರ್ಡಿನೆನ್ಸ್ ಬಿಲ್ಲನ್ನು ತೆಗೆದುಕೊಳ್ಳಬೇಕು, ಬೆಂಗಳೂರು ಕಾರ್ಪೊರೇಷನನ್ನು ಸೂಪರ್‌ಸೀಡ್ ಮಾಡುವ ಬಿಲ್ಲು, ಮುನಿಸಿಪಾಲಿಟಿಗಳ ಬಿಲ್ಲು ಇಂತಹ ಕೆಲವು ಮುಖ್ಯವಾದ ಬಿಲ್ಲುಗಳಿವೆ ಎಂದು ಹೇಳುತ್ತಾರೆ. ಇದು ಪಾಸಾಗಲೇ ಬೇಕು ಎಂದು ಹೇಳುತ್ತಾರೆ. ಇವೆಲ್ಲಾ ಬಹಳ ಮುಖ್ಯವಾದಂತಹ ವಿಷಯಗಳು. ಇವನ್ನು ಎರಡು ಹಾಗೂ ಮೂರು ಗಂಟೆಗಳ ಅವಧಿಯಲ್ಲಿ ಚರ್ಚೆ ಮಾಡುವಂತಹುದಲ್ಲ. ತಾವು ಇದನ್ನು ನೋಡಿದರೆ ತಮಗೇ ಗೊತ್ತಾಗುತ್ತದೆ. ಈಗಾಗಲೇ ಪಂಚಾಯತಿ ರಾಜ್ಯದ ಮಸೂದೆ ಬದಿಗೆ ಹೋಗಿದೆ. ಆದುದರಿಂದ ನಾನು ತಮ್ಮನ್ನು ಕೇಳುವುದು, ಈ ಸಭೆಯ ಪರವಾಗಿ ಸರಕಾರಕ್ಕೆ ಮುಂದೆ ಇಂತಹ ಮುಖ್ಯವಾದ ಬಿಲ್ಲುಗಳನ್ನು ತರುವಾಗ ಸಾಕಷ್ಟು ಸಮಯ ಕೊಡಬೇಕು, ಅದಕ್ಕೆ ತಕ್ಕಷ್ಟು ಕಾಲಾವಕಾಶ ಇರಬೇಕೆಂದು ಹೇಳಬೇಕು.

Mr. SPEAKER.—No I am going to adjourn the House. I am inviting a few members to my Chamber. Such of those who want may come to my Chamber immediately and we will discuss.

I do want to dispel idea that members have not been given time. If there is anybody who can entertain that grievance, it is other than the member Sri Gopala Gowda. He belongs to a Party which has only one member in the House and on every Bill I have given him time. I have given him time much more than his Party is entitled to. After all to say that members have not been given time is only a travesy of truth and nothing else.

Such of those members who are desirous may kindly meet me in my Chambers.

The House will now adjourn and re-assemble at 2-30 P.M.

The House adjourned at Thirty-five Minutes past Twelve of the Clock and re-assembled at Thirty-eight Minutes past Two of the Clock.

[MR. SPEAKER in the Chair]

CHANNARAYAPATNA TOWN MUNICIPALITY (ALTERATION OF LIMITS) VALIDATION BILL, 1965.

Motion to consider.

Sri Y. RAMACHANDRA (Deputy Minister for Municipal Administration).—Sir, I beg to move :

"That the Channarayapatna Town Municipality (Alteration of Limits) Validation Bill, 1965, be taken into consideration."

Mr. SPEAKER.—Motion moved :

"That the Channarayapatna Town Municipality (Alteration of Limits) Validation Bill, 1965, be taken into consideration."

ಶ್ರೀ ವೈ. ರಾಮಚಂದ್ರ.—ಮಾನ್ಯ ಸಭಾಪತಿಯವರೇ, ಚನ್ನರಾಯಪಟ್ಟಣ ಮುನಿಸಿಪಾಲಿಟಿಯ ಪಕ್ಕಕ್ಕೆ ಹೊಂದಿಕೊಂಡಿರತಕ್ಕ ಕೆಲವು ಪ್ರದೇಶಗಳನ್ನು ಚನ್ನರಾಯಪಟ್ಟಣ ಮುನಿಸಿಪಾಲಿಟಿಯ ಎಲ್ಲೆಯೊಳಕ್ಕೆ ಸೇರಿಸಿಕೊಳ್ಳಬೇಕೆಂದು ಆ ಪ್ರದೇಶಗಳಲ್ಲಿರತಕ್ಕ ಜನರೆಲ್ಲರೂ ಕೇಳುತ್ತಿದ್ದರು. ಅದರಿಂದ ಅವರಿಗೆ ನೀರು, ಲೈಟ್ ಮತ್ತು ರಸ್ತೆ ಇತ್ಯಾದಿ ಸೌಕರ್ಯಗಳೆಲ್ಲಾ ದೊರೆಯುತ್ತವೆ. ಈ ಸೌಕರ್ಯ ದೃಷ್ಟಿಯಿಂದ ಅವರು ಆ ಪ್ರದೇಶಗಳನ್ನು ಅದರಲ್ಲಿ ಒಳಪಡಿಸಿಕೊಳ್ಳಬೇಕೆಂದು ತೀರ್ಮಾನ ಮಾಡಿ ಆ ಬಗ್ಗೆ 1951ರಲ್ಲೇ ಒಂದು ನೋಟಿಫಿಕೇಷನ್ನನ್ನೂ ಸಹಾ ಹೊರಡಿಸಿ ಆ ಬಗ್ಗೆ ಅಬ್ಜೆಕ್ಷನ್‌ಗಳನ್ನು ಕರೆಯಲಾಗಿತ್ತು. ಇತ್ತೀಚೆಗೆ ಫೈನಲ್ ನೋಟಿಫಿಕೇಷನ್ ಆಗಿಲ್ಲ ಎಂದು ಗೊತ್ತಾದ ಮೇಲೆ ಈಗ ತಂದಿದ್ದೇವೆ. ಇಲ್ಲಿಯವರೆಗೂ ಆ ಪ್ರದೇಶದಲ್ಲಿ ಅದನ್ನು ಮುನಿಸಿಪಾಲಿಟಿಯ ಎಲ್ಲೆಗಳ ಒಳಗೆ ತೆಗೆದುಕೊಂಡು ಮುನಿಸಿಪಾಲಿಟಿಯ ಕೆಲಸ ಕಾರ್ಯಗಳು ನಡೆಯುತ್ತಾ ಇವೆ. ಕಂದಾಯ ವಸೂಲು ಮಾಡುತ್ತಾ ಇದ್ದಾರೆ, ಕೊಡಬೇಕಾದ ಅನುಕೂಲಗಳನ್ನೆಲ್ಲಾ ಕೊಟ್ಟಿದೆ. ಇದುವರೆಗೆ ನಡೆದಿರತಕ್ಕ ಕೆಲಸ ಕ್ರಮಬದ್ಧ ಮಾಡುವುದಕ್ಕೆ ಈ ಮಸೂದೆಯನ್ನು ತಂದಿದೆ. ಇದರಿಂದ ಯಾರಿಗೂ ಯಾವ ವಿಧವಾದ ತೊಂದರೆಯಾಗುವುದಿಲ್ಲ. ಮಾನ್ಯ ಸದಸ್ಯರು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳಿ ಪ್ರಾರ್ಥಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಸಚಿವರು ಚನ್ನರಾಯಪಟ್ಟಣ ಟೌನ್ ಮುನಿಸಿಪಾಲಿಟಿಯ ಲಿಮಿಟ್ಸನ್ನು ಹಚ್ಚು ಮಾಡುವ ಬಗ್ಗೆ ಏನೊಂದು ಮಸೂದೆಯನ್ನು ತಂದಿದ್ದಾರೆ ಈ ಮಸೂದೆಯ ಬಗ್ಗೆ ಶಿವಪ್ಪನವರು ಸಭೆಯಲ್ಲಿ ಇದ್ದರೆ ಅವರು ಹೆಚ್ಚು ವಿಷಯವನ್ನು ಹೇಳುತ್ತಾ ಇದ್ದರು ಎಂದು ಕಾಣುತ್ತದೆ. ನಾನು ಒಂದು ಮಾತನ್ನು ಹೇಳಬೇಕಾಗಿದೆ. ಸರ್ಕಾರ ಇಂತಹ ಅಭಿವೃದ್ಧಿ ಕಾರ್ಯಗಳ ಬಗ್ಗೆ ಎಷ್ಟು ಮಟ್ಟಿನ ಮಹತ್ವ ಪೂರ್ಣವಾದ ಲಕ್ಷ್ಯ ಕೊಡುತ್ತಾ ಇದೆ ಎನ್ನುವುದನ್ನು ಹೇಳಬೇಕಾಗಿದೆ. 1951ರಲ್ಲಿ ನೋಟಿಫಿಕೇಷನ್ ಹೊರಡಿಸಿ ನಗರಾಭಿವೃದ್ಧಿ ಕೆಲಸ ಕಾರ್ಯಗಳಿಗೆ ಏನು ಅಡ್ಡಿ ಇದೆ ಅದನ್ನು ಹೋಗರಾಡಿಸುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಬೌಂಡರಿ ಆರ್ಬಿಟ್ರರ್ ಮಾಡಿಬೇಕೆಂದು ಹೇಳಿ 1951ನೇ ಇಸವಿಯಲ್ಲಿ ನೋಟಿಫೈ ಮಾಡಿದರು, ನಾನು ಇದರ ವಿವರಗಳಿಗೆ ಹೋಗುವುದಿಲ್ಲ. ಅವು ನೋಟಿಫಿಕೇಷನ್ನಲ್ಲಿಯೇ ಇವೆ. ಚನ್ನರಾಯಪಟ್ಟಣದ ಟೌನ್ ಸುತ್ತಮುತ್ತಲೂ ಯಾವ ಯಾವ ಪ್ರದೇಶಗಳನ್ನು ಅವರು ಪಡೆದುಕೊಳ್ಳಬೇಕು, ಸರ್ವೆ ನಂಬರು ಎಷ್ಟು ಎಂಬುದು ಎಲ್ಲಾ ಅದರಲ್ಲಿ ಇವೆ. ನಾನು ಹೇಳುವುದು ಇಷ್ಟೆ; 1951ರಿಂದ 1965ರ ತನಕ ಒಂದು ಪುರಸಭೆಯ ಅಭಿವೃದ್ಧಿ ಒಂದು ನಗರಸಭೆಯ ಅಭಿವೃದ್ಧಿಗೆ ಅಗತ್ಯವಾಗಿ ಕೈಕೊಳ್ಳಬೇಕಾದ ಕೆಲಸಕಾರ್ಯಗಳನ್ನು ಸರ್ಕಾರದವರು ಮಾಡದೇ ವಿಳಂಬ ಮಾಡಿ ಒಂದು ದೊಡ್ಡ ಅಕ್ಷಮ್ಯ ಅಪರಾಧವನ್ನೇ ಮಾಡಿದ್ದಾರೆ ಎಂದು ನನಗೆ ಅನಿಸುತ್ತದೆ. ಇಂತಹ ಅನೇಕ ಬೇಡಿಕೆಗಳನ್ನು ಇಟ್ಟು ಅದರ ಬಗ್ಗೆ ಸರ್ಕಾರದವರು ಅಧಿಕಾರವನ್ನು ಹೊಂದಿರುತ್ತಾರೆ. ಸರ್ಕಾರದವರು ನೋಟಿಫೈ ಮಾಡಬೇಕು, ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಇನ್‌ಸ್ಟಿಟ್ಯೂಟ್ ಮಾಡಬೇಕು, ಅದಕೆಲ್ಲಾ ಬೇರೆ ಬೇರೆ ಕಾನೂನು ಇದೆ. ಮುನಿಸಿಪಲ್ ಆಕ್ಟ್ ಪ್ರಕಾರ ಅಧಿಕಾರವನ್ನು ಹೊಂದಿರುತ್ತಾರೆ. ಈ ಅಧಿಕಾರವನ್ನು ಸಕಾಲದಲ್ಲಿ ಸಂಬಂಧಪಟ್ಟ ಇಲಾಖೆಯವರು ಇದು ನಮ್ಮ ಕೆಲಸ ಇಲ್ಲಿ ಯಾಕೂ ಬಂದು ನಮ್ಮನ್ನು ಬೇಡಬೇಕಾದ್ದು, ಕಾಡಬೇಕಾದ್ದು ಇಲ್ಲ ಎನ್ನುವ ಒಂದು ಅಭಿಪ್ರಾಯವನ್ನು ಗ್ರಹಿಸಿಕೊಂಡು ಅವರು ಕೆಲಸ ಮಾಡುವುದಿಲ್ಲ. ಇದು ಒಂದು ಇಂತಹ ವಿಳಂಬದ ಬಗ್ಗೆ ಒತ್ತಿ ಹೇಳತಕ್ಕ ಸಾಕ್ಷಿರೂಪದಲ್ಲಿ ಇದೆ. ಈಗಲಾದರೂ, ಇದು ಬಹಳ ತಡವಾಗಿದೆ ಕುಂಭಕರ್ಣ ನಿದ್ರೆಯಿಂದ ಎದ್ದ ಹಾಗೆ ನಮ್ಮ ಸರ್ಕಾರ ಎದ್ದಿದೆ. ಎದ್ದು ಈಗ ಇಂತಹ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರತ್ಯೇಕವಾದ ಮಸೂದೆಯನ್ನೇ ತಂದಿದ್ದಾರೆ. ಈ ಮಸೂದೆ ಬಂದ ಮೇಲೂ ಕೂಡ ಕಾರ್ಯಕ್ರಮ ತೆಗೆದುಕೊಳ್ಳುವುದರ ಬಗ್ಗೆ ಸರ್ಕಾರ ಪುನಃ ನಿದ್ರೆ ಹೋದರೆ ಈ ಮಸೂದೆಯನ್ನು ಈ ಸಭೆ ಮಾತ್ರ ಮಾಡಿಯೂ ಏನೂ ಪ್ರಯೋಜನವಾಗುವುದಿಲ್ಲ. ಇಂತಹ ಕೆಲಸಗಳಲ್ಲಿ ಆದು ಯುದ್ಧ ಕಾಲವಾಗಿರಲಿ ಶಾಂತಿ ಕಾಲವೇ ಆಗಿರಲಿ ಸಾರ್ವಜನಿಕ ಅಭಿವೃದ್ಧಿಕಾರ್ಯಗಳ ಮತ್ತು ಅನುಕೂಲತೆಗಳ ಬಗ್ಗೆ ಸರ್ಕಾರ ನೂಕ್ತವಾದ ಗಮನವನ್ನು ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿದ್ದಯ್ಯ ಕಾತೀಮಠ್.—ಇದರಲ್ಲಿ ನೋಟಿಫಿಕೇಷನ್ ಕೊಡುತ್ತಾ ಇರುವುದರಲ್ಲಿ ಈ ರೀತಿ ಹೇಳುತ್ತಾ ಇದ್ದಾರೆ: "Calling for objection within two months from the date of notification." ನನಗೆ ತಿಳಿದ ಹಾಗೆ ಮುನಿಸಿಪಾಲಿಟಿ ಆಕ್ಟ್ ಬಗ್ಗೆ ಯೂನಿಫಾರಂ

(ಶ್ರೀ ಸಿದ್ದಯ್ಯ ಕಾತೀಮಠ್)

ಆಕ್ಟ್‌ನ್ನು ಪಾಸ್ ಮಾಡಿದ್ದೇವೆ. ಇದರಲ್ಲಿ ಬೌಂಡರಿ ಏರಿಯಾಸ್ ಯಾವ ರೀತಿ ಮಾಡಿದ್ದಾರೆ ಎಂಬುದನ್ನು ತಿಳಿಸಿಲ್ಲ, ಇದರಲ್ಲಿ ನ್ಯೂನತೆ ಏನಾದರೂ ಇದ್ದರೆ ಹೊಸ ಆಕ್ಟ್ ಪ್ರಕಾರ ಅಮೆಂಡ್‌ಮೆಂಟ್ ಮಾಡಿದ್ದಾರೆಯೇ ಎಂಬುದನ್ನು ಈ ಸಭೆಗೆ ತಿಳಿಸಬೇಕೆಂದು ಹೇಳುತ್ತೇನೆ.

† Sri G. V. GOWDA.—There is time limit prescribed for inviting objections within two months. We do not know whether the objections were received are not. Certain areas are being treated as part of the Municipality and taxes levied and collected and the House has to consider the legality of the levy and collection. We are aware of the High Court order which struck down the right of collection of tax illegally and that has got to be refunded. Yesterday we adopted an amendment with regard to the illegal authorisation for collection of taxes. Such being the case, collection made in these areas which have not been included in the Municipality by means of legal notification is not sustainable. Can it be sustainable ?

Now, is it not open to the Government, Sir, to issue notification under the existing enactment inviting objections and including the area in the municipality ? Why did the Government keep quiet since 1961 to 1965 and validate something for which there is no existing enactment ? That Act is repealed and under the repealed enactment no notification could be treated as subsisting. Therefore, my submission is it is a notification issued under a repealed enactment. Therefore I am suggesting that what we are doing may not be sustainable because we are validating some notification under an enactment which is not in existence.

ಶ್ರೀ ವೈ. ರಾಮಚಂದ್ರ.—ನಾನು ಮೊದಲೇ ತಿಳಿಸಿದ ಹಾಗೆ 1961 ರಲ್ಲಿ ಪ್ರಿಲಿಮಿನೆರಿ ನೋಟಿಫಿಕೇಷನ್ ಆಯಿತು ಮತ್ತು ಅಬ್ಜೆಕ್ಷನ್ ಕಾರ್ ಫಾರ್ ಮಾಡಿದ 2 ತಿಂಗಳೊಳಗೆ ಅಬ್ಜೆಕ್ಷನ್ ಬರಬೇಕು ಎಂದು ಹೇಳಿದ್ದೆವು ಬಂದಿಲ್ಲ. ನಂತರ ಫೈನಲ್ ನೋಟಿಫಿಕೇಶನ್ ಆಗಬೇಕಾಗಿತ್ತು. ಆಯಿತೋ ಇಲ್ಲವೋ ಗೊತ್ತಿಲ್ಲ. ಈ ಹೊಸದಾಗಿ ಸೇರಿಸಿದ ಭಾಗ ಮುನಿಸಿಪಾಲಿಟಿ ಭಾಗ ಆಗಿದ್ದು ಅಲ್ಲಿ ಎಲ್ಲಾ ತರಹದ ಸೌಲಭ್ಯ ಅವರಿಗೆ ಕೊಟ್ಟಿದ್ದಾರೆ. ಅವರು ಕಂದಾಯ ಕೊಡುತ್ತಿದ್ದಾರೆ. ಫೈನಲ್ ನೋಟಿಫಿಕೇಶನ್ ಆಗದಿರುವುದರಿಂದ ಸ್ವಲ್ಪ ತೊಂದರೆಯಾಗಿದೆ. ಈ ತೊಂದರೆ ಪರಿಹಾರ ಮಾಡುವುದಕ್ಕೆ ಇದನ್ನು ತಂದಿದ್ದೇವೆ. ಹೊಸ ಆಕ್ಟ್ ಪ್ರಕಾರ ಅದನ್ನು ಮಾಡುವುದಕ್ಕಾಗುವುದಿಲ್ಲ. ಏನೇನು ಕಿಂದೆ ಮಾಡಿದ್ದಾರೆ, ಅದನ್ನು ಕ್ರಮಬದ್ಧವಾಗಿ ಮಾಡುವುದಕ್ಕೆ ಈ ಮಸೂದೆ ತಮ್ಮ ಮುಂದೆ ತಂದಿದ್ದೇವೆ. ಹೊಸ ಆಕ್ಟಿಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಇದರಿಂದ ಯಾರಿಗೂ ಏನೂ ತೊಂದರೆಯಾಗುವುದಿಲ್ಲ.

Sri C. J. MUCKANNAPPA.—Under what Act the Government are going to regulate or validate ?

Mr. SPEAKER.—There is fallacy in the argument of Sri G. V. Gowda into which fallacy Sri Muckannappa has fallen deep. This is not an amendment to Mysore Districts Boards and Mucipalities Act. This is Channarayapatna Town Municipality (Alteration of Limits) Validation Bill, 1965.

Sri C. J. MUCKANNAPPA.—Under what provisions of the Act they are going to do it ? There is also a new Act in force.

Mr. SPEAKER.—No doubt the 1951 Act is repealed and replaced by a new Act. If they proposed to amend the repealed Act, then the

Hon'ble Member can get up and say how are they going to amend an Act which is not in existence ? Now we are not amending that Act. We are having a validation of an error that has been done. Sri G. V. Gowda threw a big bomb by saying that the High Court had ordered the repayment of an amount paid illegally on a previous occasion. In the first place, it does not arise out of this. In the next place, it is not a money paid under a mistake. It is money paid for services rendered. Here we are only concerned with regard to validity of the Bill or otherwise. We are not only validating an alternation which has been done in an irregular fashion. I am not concerned whether it is proper or otherwise or whether there is justifiable delay or otherwise. All I am concerned with is whether we can permit this Bill to be debated or put to the vote of the House or not. Now I will put the Bill to the vote of the House. The question is :

"That the Channarayapatna Town Municipality (Alteration of Limits) Validation Bill, 1965, be taken into consideration."

The motion was adopted.

CLAUSES

Mr. SPEAKER.—The question is :

"That clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—The question is :

"That Clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to Pass.

Sri Y. RAMACHANDRA.—I beg to move :

" That Channarayapatna Town Municipality (Alteration of Limits) Validation Bill, 1965, be passed."

Mr. SPEAKER.—The question is :

"That Channarayapatna Town Municipality (Alteration of Limits) Validation Bill, 1965, be passed."

The motion was adopted.